ಮನೆಯಿಂದ ಹೊರಡುವಾಗಲೇ ನೆನಪಾದದ್ದು ಅಯ್ಯೋ ಕೊಡೆನ ಹೊರ ಹೋದ್ಕಡೆ ಬಿಟ್ಟು ಬಂದಿದಿನಂತ. ಎರಡ್ಮೂರ್ ದಿನದಿಂದ ಇಲ್ಲಿ ಎಂಥ ಮಳೆ ಮರ್ರಾ.. ಈಗ ಮಲೆನಾಡಿಗೆ ಮಲೆಗಾಲದ ಕಳೆ ಬಂತು ನೋಡಿ. ಛತ್ರಿಯಿಲ್ಲದೆ ಹೊರಗ್ ಹೋಗಂಗುಂಟಾ? ಆ ಛತ್ರಿನೋ ಮಳೆ ಸುರಿತಿದ್ರೆ ಮಾತ್ರ ನೆನಪಾಗುತ್ತೆ. ಇಲ್ಲಾಂದ್ರೆ ಹೋದ್ಕಡೇನೆ ಕೈ ಬಿಡ್ತು ಅಂತ್ಲೆ.

ನಮ್ಮೂರ್ ತೀರ್ಥಹಳ್ಳಿಯ ಮಳೆಗಾಲದಲ್ಲಿ ಕೈಯಲ್ಲೊಂದು ಕೊಡೆ ಇರ್ಲೇಬೇಕು ನೋಡಿ. ಹಂಗಾಗೆ ಈ ಬಾರಿ ಮಳೆಗಾಲದ ಆರಂಭದಲ್ಲಿ ನಮ್ಮ್ ಮನೆವ್ರು ನಂಗಿಷ್ಟದ್ ಗುಲಾಬಿ ಬಣ್ಣದ ಛತ್ರಿಯೊಂದು ಪ್ರೀತಿಯಿಂದ ತಂದು ಕೊಟ್ರು. ಆಗ್ಲೆ ಮಗಳ ಕಣ್ಣು ಅದರ ಮೇಲೆ ಬಿದ್ದು ಬಿಡ್ತಲ್ಲ! 'ಅಮ್ಮ ನಾಳೆ ಒಂದಿನ ಈ ಛತ್ರಿನ ನಾನು ಶಾಲೆಗೆ ತಗೊಂಡು ಹೋಗ್ತಿನಿ' ಅಂದ್ಲು. 'ಸರಿ ಹೂಂ' ಅಂದೆ. ಆಮೇಲೆ ಅವ್ಳಿಗೆ ಅದರ ಮೇಲೆ ಏನು ಮೋಹ ಹುಟ್ಟಿ ಬಿಡ್ತೋ ನಾ ಕಾಣೆ. 'ಇದು ನನಗೆ ಇರ್ಲಿ ಕಣೆ, ನೀ ಬೇರೆ ತಗೋ. ಇಲ್ಲಾಂದ್ರೆ ನನ್ನ ಹಳೆ ಛತ್ರಿ ನೀನೆ ತೊಕೋ ಪ್ಲೀಸ್' ಅಂದ್ಲು.

ಮುಗಿತಲ್ಲ! ಎಷ್ಟಂದ್ರು ಕರುಳ ಬಳ್ಳಿ, ಮಾತಾಡಾಂಗಿಲ್ಲ. ಆದ್ರೆ ಅವ್ಳು ಅದುನ್ನ ಹಿಡಿದು ಅಂದದಿಂದ ನಡೆಯುವಾಗಲೆಲ್ಲಾ ಮನ ಚಂದದಿಂದ ಕುಣಿಯುತ್ತಿರುತ್ತದೆ. ಹಾಲು ಬಣ್ಣದ ಆಕೆಯ ಕೆನ್ನೆಯ ಮೇಲೆ ಕೊಡೆಯ ಗುಲಾಬಿ ವರ್ಣ ಪ್ರತಿಫಲಿಸುತ್ತಿದ್ದರೆ ಆ ಅಂದ ಮತ್ತೆ ಮತ್ತೆ ನೋಡಬೇಕೆಂಬ ಅದಮ್ಯ ಬಯಕೆಯುಂಟಾಗುತ್ತದೆ. ಅಂತೆಯೇ ಮನ ನನ್ನ ಬಾಲ್ಯಕ್ಕೆ ಜಾರಿ ಬಿಡುತ್ತದೆ. ನಾನು ಶಾಲೆಗೆ ಹೋಗುವಾಗ ನನ್ನಪ್ಪ ನನಗೂ ಒಂದು ಕಪ್ಪು ಬಟ್ಟೆಯ ದೊಡ್ಡ ಕೊಡೆ ಕೊಡಿಸಿದ್ದರು. ಅದನ್ನ ಎಲ್ಲೂ ಕಳೆದುಕೊಳ್ಳಬಾರದೆಂದೂ, ಅಕಸ್ಮಾತ್ ಕಳೆದುಕೊಂಡರೂ ಮರಳಿ ನಮ್ಮ ವಿಳಾಸಕ್ಕೆ ಬಂದು ತಲುಪುವಂತಾಗಲೆಂದು ನನ್ನ ಹೆಸರು, ಶಾಲೆ, ತರಗತಿಯನ್ನು ಅದರ ಒಳ ಭಾಗದಲ್ಲಿ ಬಿಳಿ ಬಣ್ಣದ ಪೈಂಟಿನಿಂದ ಬರೆಸಿಕೊಟ್ಟಿದ್ದರು.

ಅಂದಿನ ಆ ಛತ್ರಿಗಳು ಏನ್ ಗಟ್ಟಿ ಮುಟ್ಟಾಗಿತಂತೀರಿ! ಎಷ್ಟು ವರ್ಷವಾದರೂ ಬಣ್ಣವೂ ಮಾಸದೆ, ಕಡ್ಡಿಯೂ ಮುರಿಯದೆ ಜಗಜಟ್ಟಿಯನ್ನು ನೆನಪಿಸುವಂತಿತ್ತು. ಬಳಸಿ ಬಳಸಿ ಬೇಜಾರಾಗಿ ನಾವೇ ಮೂಲೆಗೆಸೆಯಬೇಕಿತ್ತೆ ಹೊರತು ಅದಕ್ಕೇನು ಮುಪ್ಪಡರುತ್ತಿರಲಿಲ್ಲ. ಅಬ್ಬಾ! ಇಂದಿನ ಕೊಡೆಗಳೆ ಎಂಥ ನಾಜೂಕು ಮಾರಿಯರು ಅಂತೀನಿ. ದೇವ್ರೆ ಕಾಪಾಡಬೇಕು. ಏನಾದ್ರು ಗಾಳಿ, ಮಳೆ ಸ್ವಲ್ಪ ಜೋರಾದ್ರು ಅಷ್ಟೇ ಸಾಕು, ಗಾಳಿ ಬೀಸಿದತ್ತಲೆ ನಮ್ಮನ್ನು ಎಳೆದುಕೊಂಡು ಹೊರಟು ಬಿಡುತ್ತೆ. ಇದೇನು ಛತ್ರಿನೋ ಪ್ಯಾರಾಚೂಟೋ ಅನುಮಾನ ಕಾಡಕ್ಕೆ ಶುರುವಾಗುತ್ತೆ. ಕೊಡೆ ನಮ್ಮನ್ನು ಎಳೆಯೋದು ನಾವು ಕೊಡೆನು ಎಳೆಯೋದು; ಈ ಜಗ್ಗಾಟದಲ್ಲಿ ಮರ್ರಾ ಮೈ ಪೂರ ಒದ್ದೆ ಮುದ್ದೆ.

ಇನ್ನು ಸ್ವಲ್ಪ ಜೋರಾಗಿ ಛತ್ರಿಯ ಆಟೋಮ್ಯಾಟಿಕ್ ಬಟನ್ ಒತ್ತಿದ್ರೆ ಸಾಕು, ಮುನಿಸಿಕೊಂಡು ಆಕಾಶದತ್ತ ಮುಖ ತಿರುಗಿಸಿ ನಿಂತು ಬಿಡುತ್ತೆ. ಸಾಲದಕ್ಕೆ ಅದರ ಅಸ್ಥಿ ಪಂಜರಗಳು ಜೋಲು ಮೋರೆ ಹಾಕಿಕೊಂಡು ಭೂಮಿಯತ್ತ ಮುಖ ಮಾಡಿ ಮಲಗಿ ಬಿಡ್ತವೆ. ಅಲ್ಲಿಗೆ ಅದರ ಕತೆ ಮುಗಿತೂಂತಲೇ ಅರ್ಥ. ಅದುನ್ನ ಮತ್ತೆ ರಿಪೇರಿ ಮಾಡಿಸೋದೂಂದ್ರೆ ಗುಡ್ಡಕ್ಕೆ ಮಣ್ ಹೊತ್ತಂಗೆ. ಈ ಅವಸ್ಥೆಯಿಂದಾಗೆ ಇರ್ಬೇಕು ಇಂದು ಕೊಡೆ ರಿಪೇರಿಯವರದು ಅಡ್ರೆಸ್ಸೇ ಇಲ್ಲ. ಒಟ್ಟಿನಲ್ಲಿ ಮಳೆಗಾಲ ಮುಗಿಯೋದ್ರೊಳಗೆ ಒಂದಾದ ಮೇಲೊಂದು ಕೊಡೆಗಳದ್ದೆ ಸುರಿಮಳೆ, ಅವುನ್ ಜಾಗ್ರತೆ ಮಾಡೋದಂದ್ರೆ ಥೇಟ್ ಬಿಳಿ ಆನೆ ಸಾಕಿದಂಗೆ ಅನ್ನಿಬಿಡುತ್ತೆ.

ಹಿಂದೆಲ್ಲಾ ಮಲೆನಾಡಿನ ದಟ್ಟ ಮಳೆಯಲ್ಲಿ ತೋಟಗದ್ದೆಗಳಲ್ಲಿ ನಟ್ಟಿ, ಹೂಟಿ, ಕಳೆ ಅಂತ ಮೈ ಬಗ್ಗಿಸಿ ದುಡಿಯುವಾಗ ಸಾಮಾನು, ಸರಂಜಾಮು ಸಾಗಿಸುವಾಗ, ಹೊರಗಡೆ ತಿರುಗಾಡುವಾಗ ಕೊಡೆ ಹಿಡ್ಕಂಡು ಕೆಲ್ಸ ಮಾಡುವುದು ಸುಳ್ಳಾಗಿತ್ತು. ಸುಮಾರು 40ರ ದಶಕದಲ್ಲಿ 300ರಿಂದ 350 ಇಂಚು ಮಳೆ ಇಲ್ಲಿ ಸುರಿಯುತ್ತಿದ್ದು ಒಂದು– ಒಂದೂವರೆ ತಿಂಗಳು ಸೂರ್ಯನ ದರ್ಶನವೇ ಇರುತ್ತಿರಲಿಲ್ಲ ಎಂಬುದಾಗಿ ಹಿರಿಯರು ನೆನೆಯುವುದಿದೆ. ಆಗೆಲ್ಲಾ ಇಂತಹ ಮಳೆಯಲ್ಲಿ ಮುಡಿಯಿಂದ ಮಂಡಿಯವರೆಗೂ ಕಂಬಳಿಗೊಪ್ಪೆ ಹೊದ್ದು ತಮ್ಮ ಕಾಯ ರಕ್ಷಿಸಿಕೊಳ್ಳುತ್ತಿದ್ದರು.

ಮಳೆಗೂ, ಚಳಿಗೂ ಎಂಥ ಕಾಂಬಿನೇಷನ್ ಆಗಿತ್ತು ಈ ಗೊಪ್ಪೆಗಳು. ಕರಿ ಕಂಬಳಿ, ಬಿಳಿ ಕಂಬಳಿ, ಜಾಡಿ ಕಂಬಳಿ ಹೀಗೆ ವೈವಿಧ್ಯಮಯ ಕಂಬಳಿಗೊಪ್ಪೆಗಳನ್ನು ಬಯಲು ಸೀಮೆಯ ಜನ ಇಲ್ಲಿಗೆ ಹೊತ್ತು ತಂದು ವ್ಯಾಪಾರ ಮಾಡುತ್ತಿದ್ದರಂತೆ. ಆಗೆಲ್ಲಾ ಇವು ಬಿಸಿ ಬಿಸಿ ಬೆಣ್ಣೆ ದೋಸೆಯಂತೆ ಮಾರಾಟವಾಗುತ್ತಿತ್ತಂತೆ. ಆದ್ರೆ ಇಂತಹ ಬಹುಪಯೋಗಿ ಕಂಬಳಿಗೊಪ್ಪೆಯನ್ನು ಕಿತ್ತೊಗೆದಿರುವ ಇಂದಿನ ರೈತರ ಮೈ ಮನಸ್ಸು ಸಂಪೂರ್ಣವಾಗಿ ಆಧುನಿಕ ಯುಗದ ಪ್ಲಾಸ್ಟಿಕ್ ಗೊಪ್ಪೆಗಳನ್ನು ಅಪ್ಪಿಕೊಂಡು ಆ ಆತ್ಮೀಯ ದೃಶ್ಯಗಳು ಇಲ್ಲಿ ಮರೆಯಾಗಿಬಿಟ್ಟಿವೆ.

ಆದರೂ ಕಾಲೇಜು ಚೆಲುವೆಯರು ತಮ್ಮ ತಮ್ಮ ಡ್ರೆಸ್‌ಗೆ ತಕ್ಕಂತೆ ಮ್ಯಾಚಿಂಗ್ ಕೊಡೆ ಹಿಡಿದು ಬಳುಕುತ್ತಾ ಹೋಗುವಾಗಿ ಕಣ್ಣಿಗೊಂದು ಹಬ್ಬವೇ. ಆಗೆಲ್ಲಾ ನಾನು ಕಾಲೇಜಿನಲ್ಲಿದ್ದಾಗಿನ ಘಟನೆಯೊಂದರ ನೆನಪು ಒತ್ತರಿಸಿ ಬರುತ್ತದೆ. ಎನ್‌ಸಿಸಿ ಕ್ಯಾಂಪ್‌ಗೆಂದು ಮೈಸೂರಿಗೆ ಹೊರಟಿದ್ದ ನಮ್ಮ ತಂಡ ಕೆಂಪು ಬಣ್ಣದ ಸರ್ಕಾರಿ ಬಸ್ಸು ಹತ್ತಿತ್ತು. ರಾತ್ರಿ ಊಟ ಮುಗಿಸಿ ಮನೆಯಿಂದ ಹೊರಡುವಾಗಲೇ ಜಡಿಮಳೆ ಶುರುವಾಗಿದ್ದರಿಂದ ಟ್ರಂಕಿನೊಂದಿಗೆ ಕೈಯಲ್ಲೊಂದು ಕೊಡೆ ಹಿಡಿದೇ ಹೊರಟಿದ್ದೆ. ಮಾತು, ನಗು, ಹರಟೆ, ಅಂತ್ಯಾಕ್ಷರಿ ಎಂದು ನಮ್ಮ ಹುಮ್ಮಸ್ಸೇನೋ ಜೋರಾಗಿಯೇ ಇತ್ತು.

ಬಸ್ಸು ಮುಂದೆ ಮುಂದೆ ಸಾಗಿದಂತೆ ಮಳೆಯ ರಭಸವೂ ಹೆಚ್ಚಿ ಬಸ್ಸಿನೊಳಗೂ ನೀರು ಹನಿಯಲಾರಂಭಿಸಿ ನಮ್ಮ ಉತ್ಸಾಹಕ್ಕೆ ತಕ್ಷಣ ತಣ್ಣೀರೆರಚಿತ್ತು. ಬೇಸತ್ತ ಪ್ರಯಾಣಿಕರು ಒಂದೇ ಸಮನೆ ಕಂಡಕ್ಟರ್‌ನತ್ತ ಮುಗಿಬಿದ್ದಿದ್ದರಿಂದ ಆತನದು ಒಂದೇ ಧೋರಣೆಯಾಗಿತ್ತು. 'ಬೇಕಾದರೆ ಬನ್ನಿ, ಇಲ್ಲಾಂದ್ರೆ ಇಳಿದು ಹೋಗಿ' ಎಂದು. ಹೊರ ನೋಡಿದರೆ ಗವ್ವೆನ್ನುವ ಕತ್ತಲೆಯೊಂದಿಗೆ ನಯಾಗರ ಫಾಲ್ಸ್‌ಅನ್ನು ನೆನಪಿಸುವಂತಿದ್ದ ಸುರಿಯುವ ಮಳೆ. ಹೊರಗಿನ ಆ ಪರಿಸ್ಥಿತಿಗಿಂತ ಬಸ್ಸಿನೊಳಗಿನ ಶವರ್‌ಬಾತೇ ಉತ್ತಮವೆನಿಸಿ ಎರಡು ಮಾತಿಲ್ಲದೆ ಬಳಿಯಿದ್ದ ಕೊಡೆ ಬಿಡಿಸಿಕೊಳ್ಳುತ್ತಿದ್ದೆವು. ಯೌವ್ವನದ ಹುರುಪಿನ ಪ್ರತಿ ಕ್ಷಣವೂ ನೆನಪಿನ ಬುತ್ತಿಯೇ ಆದರೂ ಆ ಸಂದರ್ಭದಲ್ಲಿ ಮಳೆಯಿಂದ ರಕ್ಷಿಸಿದ ಕೊಡೆ ಎಂಬ ಆಪತ್ಬಾಂಧವನನ್ನು ಎಂದಾದರೂ ಮರೆಯಲು ಸಾಧ್ಯವೇ ?

ಇಂತಹ ಕೊಡೆಗಳ ಇತಿಹಾಸ ಹುಡುಕಿ ಹೊರಟರೆ ಹಲವು ಸೋಜಿಗದ ಸಂಗತಿಗಳು ನಮಗೆ ಲಭಿಸುತ್ತವೆ. ಸುಮಾರು 1950ರ ಆಸುಪಾಸಿನಲ್ಲಿ ದಕ್ಷಿಣ ಕನ್ನಡದಿಂದ ಮಲೆನಾಡಿಗೆ ಓಲಿ ಕೊಡೆಗಳು ಬರುತ್ತಿದ್ದವು. ಅವು ಮಡಚುವಂತಿರಲಿಲ್ಲ. ಆನಂತರ ಬಂದ ಕೊಡೆ ಎಂದರೆ ದಪ್ಪ ಬಟ್ಟೆ, ದಪ್ಪ ಕಡ್ಡಿ, ದಪ್ಪ ದೊಣ್ಣೆಯ ಕೊಡೆ. ನಂತರ ಸ್ಟೀಲ್ ಕಡ್ಡಿಯ ಸೂರ್ಯ ಮಾರ್ಕಿನ ಕೊಡೆಗಳು. ಅಂದಿನ ರಭಸದ ಮಳೆಗೂ ಒಂದೇ ಛತ್ರಿಯಡಿ ಮೂರು ಜನ ಒಟ್ಟಿಗೇ ಇದರಲ್ಲಿ ರಕ್ಷಣೆ ಪಡೆಯಬಹುದಿತ್ತು. ವಿಶೇಷವೆಂದರೆ ಇವು ಪುರುಷರಿಗೆ ಮಾತ್ರ ಮೀಸಲಾಗಿದ್ದವು. ಕಾಲಕ್ರಮೇಣ 1–2 ಮಡಚಿನ ಲೇಡೀಸ್ ಕೊಡೆಗಳು ಬಂದವು.

ಇತ್ತೀಚೆಗೆ ಪ್ಲಾಸ್ಟಿಕ್ ಹೊದಿಕೆಯ ಬಣ್ಣ ಬಣ್ಣದ ಕೊಡೆಗಳದ್ದೇ ಕಾರುಬಾರು. ಹಿಂದಿನ ಕಾಲದ ಕೊಡೆಯ ಇನ್ನೊಂದು ವಿಶೇಷವೆಂದರೆ– ಕೈತುಂಬಾ ಟಪಾಲು, ಹೆಗಲ ಮೇಲೆ ಟಪಾಲಿನ ಚೀಲ ಹೊತ್ತು ಮನೆ ಮನೆ ಸಾಗುತ್ತಿದ್ದ ಅಂಚೆ ಅಣ್ಣನವರಿಗೆಂದೇ ಸರ್ಕಾರದಿಂದ ದೊಡ್ಡ ದೊಡ್ಡ ದೊಣ್ಣೆ ಕೊಡೆಗಳು ರವಾನೆಯಾಗುತ್ತಿದ್ದವು.

ಹೀಗೆ ಮಳೆಗೂ ಕೊಡೆಗೂ ಒಂದು ಅವಿನಾಭಾವ ಸಂಬಂಧವಿದೆ! ವಿಪರ್ಯಾಸವೆಂದರೆ ಮಲೆನಾಡಿಗರ ಬದುಕಿನೊಂದಿಗೆ ತಳಕು ಹಾಕಿಕೊಂಡಿರುವ ಮುಂಗಾರು, ಮಾನವನ ಪ್ರಕೃತಿಯೆಡೆಗಿನ ನಿರ್ಲಕ್ಷ್ಯ ಧೋರಣೆ, ದೌರ್ಜನ್ಯ ಮಾತ್ರದಿಂದಲೇ ಇಂದು ಕಣ್ಣಾಮುಚ್ಚಾಲೆ ಆಡತೊಡಗಿ ಇತ್ತೀಚಿನ ಮಳೆಗಾಲ ಕೊಡೆಯಿಲ್ಲದೆ ಕಳೆಯುವಂತಹ ವಾತಾವರಣ ನಿರ್ಮಾಣವಾಗುತ್ತಿದೆ. ಮಳೆಯ ಕ್ಷೀಣಿಸುವಿಕೆಯೊಂದಿಗೆ ಕೊಡೆಯೂ ಕಡೆಗಣನೆಗೆ ಗುರಿಯಾಗಿ ಆ ಸವಿ ಘಳಿಗೆಗಳು ಎಲ್ಲಿ ಕಣ್ಮರೆಯಾಗುವುದೇನೋ ಎಂಬ ವಿಷಾದ ಮೂಡುತ್ತಿದೆ.

ಆದರೂ ಈ ಬಾರಿ ತಡವಾಗಿಯಾದರೂ ಆರಂಭವಾದ ವರ್ಷಧಾರೆಯಲ್ಲಿ, ಆಶಾಭಾವನೆ ಹೊತ್ತು ಪ್ರೀತಿಯ ಸಂಗಾತಿಯೊಂದಿಗೆ ಕೊಡೆ ಹಿಡಿದು ಹೆಜ್ಜೆ ಹಾಕುತ್ತಿದ್ದರೆ ಅದೇನೋ ರೋಮಾಂಚನ ಮೈಯ್ಯನ್ನಾವರಿಸಿ ರಾಜ್‌ಕಪೂರ್ ಹಾಗೂ ನರ್ಗಿಸ್ ಜೋಡಿ ಮಳೆಯಲ್ಲಿ ಹಾಡುತ್ತಾ ಸಾಗುವ 'ಎವರ್‌ಗ್ರೀನ್ ಸಾಂಗ್', ಪ್ಯಾರ್ ಹುವಾ ಇಕರಾರ್ ಹುವಾ, ಪ್ಯಾರ್‌ಸೆ ಫಿರ್ ಕ್ಯೂಂ ಡರ್ತಾಹೇ ದಿಲ್, ಕೆಹತಾ ಹೈ ದಿಲ್ ರಸ್ತಾ ಮುಷ್ಕಿಲ್, ಮಾಲೂಮ್ ನಹೀ ಕಹಾಂ ಮಂಝಿಲ್.... ಎಂಬ ಹಾಡನ್ನು ಮನಸ್ಸು ಆನಂದದಿಂದ ಗುನುಗುನಿಸತೊಡಗುತ್ತದೆ.